## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.

ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ/ಪೂ.ಸಿ.ಪ/30/2019-20 ದಿನಾಂಕ:30.12.2019

### :: ಸುತ್ತೋಲೆ ::

ವಿಷಯ: - ರಾಜ್ಯ ಮಟ್ಟದಲ್ಲಿ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ದತಾ ಪರೀಕ್ಷೆಯನ್ನು ನಡೆಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ:ಇಡಿ 302 ಎಸ್‌ಎಲ್‌ಬಿ 2017 ದಿನಾಂಕ:28.11.2019.

2. ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ:30.11.2019.

3. "ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಸರಣಿ ಪ್ರಿಪರೇಟರಿ ಪರೀಕ್ಷೆ ಕಿರಿಕಿರಿ" ಎಂಬ ಶೀರ್ಷಿಕೆಯಡಿ ದಿನಾಂಕ:29.12.2019ರಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಕುರಿತು.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ-1ರ ಸರ್ಕಾರದ ಆದೇಶದಂತೆ 2019-20ನೇ ಸಾಲಿನಿಂದ ಎಸ್.ಎಸ್.ಎಲ್.ಸಿ ಪೂರ್ವಸಿದ್ದತಾ ಪರೀಕ್ಷೆಗೆ ಪ್ರಶ್ನೆಪತ್ರಿಕೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದಲೇ ರಾಜ್ಯ ಮಟ್ಟದಲ್ಲಿ ಸಿದ್ದಪಡಿಸಿ ಸರಬರಾಜು ಮಾಡಲು ಅನುಮತಿಸಿ ಆದೇಶಿಸಲಾಗಿರುತ್ತದೆ. ಈ ಸಂಬಂಧ ಉಲ್ಲೇಖಿತ-2ರ ಸುತ್ತೋಲೆಯಲ್ಲಿ ಉಪನಿರ್ದೇಶಕರು (ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಶಾಲಾ ಮುಖ್ಯಶಿಕ್ಷಕರುಗಳ ವಿವಿಧ ಹಂತದ ಪ್ರಕ್ರಿಯೆಗಳು/ಜವಾಬ್ದಾರಿಗಳ ಕುರಿತು ತಿಳಿಸಲಾಗಿರುತ್ತದೆ. **ಹಾಗೂ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪೂರ್ವಸಿದ್ದತಾ ಪರೀಕ್ಷೆಯನ್ನು ಹೊರತುಪಡಿಸಿ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಯಾವುದೇ ಪೂರ್ವಸಿದ್ದತಾ ಪರೀಕ್ಷೆಯನ್ನು ನಡೆಸತಕ್ಕದ್ದಲ್ಲ ಎಂದು ತಿಳಿಸಲಾಗಿರುತ್ತದೆ.**

ಆದಾಗ್ಯೂ ಉಲ್ಲೇಖ-3ರಲ್ಲಿ "ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಸರಣಿ ಪ್ರಿಪರೇಟರಿ ಪರೀಕ್ಷೆ ಕಿರಿಕಿರಿ" ಹಾಗೂ ಒಂದೇ ಪೂರ್ವಭಾವಿ ಪರೀಕ್ಷೆ ಎಂಬ ನಿಯಮ ಹಲವು ಜಿಲ್ಲೆಗಳಲ್ಲಿ ಉಲ್ಲಂಘನೆ ಎಂಬ ಶೀರ್ಷಿಕೆಯಡಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಈ ವಿಷಯವನ್ನು ಇಲಾಖೆಯು ತೀವ್ರವಾಗಿ ಪರಿಗಣಿಸಿದೆ. ಇದರಿಂದ ಮಕ್ಕಳಿಗೆ ತೊಂದರೆ ಹಾಗೂ ಅನಗತ್ಯ ಒತ್ತಡ ಉಂಟಾಗುತ್ತಿರುವುದನ್ನು ಮನಗಂಡು ಯಾವುದೇ ರಾಜ್ಯಮಟ್ಟದ/ಜಿಲ್ಲಾ/ತಾಲ್ಲೂಕು ಮಟ್ಟದ ಶಿಕ್ಷಕರ ಸಂಘಸಂಸ್ಥೆಗಳಿಂದ ಪೂರ್ವ ಸಿದ್ದತಾ ಪರೀಕ್ಷೆಗಳನ್ನು ನಡೆಸುವುದು ನಿಯಮಬಾಹಿರವಾಗಿರುತ್ತದೆ. ಈ ರೀತಿ ಮಂಡಳಿಯಿಂದ ನಡೆಸುವ ಪೂರ್ವ ಸಿದ್ದತಾ ಪರೀಕ್ಷೆ ಮತ್ತು ಶಾಲಾ ಹಂತದಲ್ಲಿನ ಪರೀಕ್ಷೆಯನ್ನು ಹೊರತುಪಡಿಸಿ ಇನ್ನಿತರೆ ಯಾವುದೇ ಪರೀಕ್ಷೆಗಳನ್ನು ಸಂಘದ ವತಿಯಿಂದ ನಡೆಸುವುದು ಕಂಡುಬಂದಲ್ಲಿ ಅಂತಹ ಸಂಘದ ಪದಾಧಿಕಾರಿಗಳ ಹಾಗೂ ಶಾಲೆಗಳ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಹಾಗೂ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಗಮನಹರಿಸಿ ಮೇಲೆ ತಿಳಿಸಿರುವುದಕ್ಕಿಂತ ಹೆಚ್ಚಿನ ಪೂರ್ವ ಸಿದ್ದತಾ ಪರೀಕ್ಷೆಗಳು ನಡೆಯದಂತೆ ಸೂಕ್ತಕ್ರಮ ಕೈಗೊಳ್ಳಲು ಸೂಚಿಸಿದೆ. ಒಂದು ವೇಳೆ ಇಂತಹ ಪ್ರಕರಣಗಳು ಕಂಡುಬಂದಲ್ಲಿ ಮುಂದಿನಕ್ರಮ ಜರುಗಿಸಿ ಕೂಡಲೇ ಮಂಡಳಿಗೆ ವರದಿಮಾಡಲು ತಿಳಿಸಿದೆ.

(ಡಾ|| ಕೆ.ಜಿ. ಜಗದೀಶ)
ಆಯುಕ್ತರು, ಸಾ.ಶಿ.ಇ
ಹಾಗೂ ಅಧ್ಯಕ್ಷರು ಕ.ಪ್ರೌ.ಶಿ.ಪ.ಮಂಡಳಿ

**ಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

Scanned by CamScanner